ಗಾಜಿನ ಹೂಜಿಯಿಂದ ಲೋಟಕ್ಕೆ ನೀರು ಬಗ್ಗಿಸಿ, 'ಇದು ಕುಡೀರಿ' ಎಂದಳು. ನೀರು ಕುಡಿದೆ, ಕೋಪ ಒಂದಿಷ್ಟು ತಹಬಂದಿಗೆ ಬಂತು. 'ಸಾರಿ' ಎಂದು ಹೇಳಿ ಅಲ್ಲಿಂದ ಹೊರಟುಬಿಟ್ಟೆ.

ಎರಡು ಮೂರುದಿನ ನಾನಲ್ಲಿಗೆ ಹೋಗಲೇ ಇಲ್ಲ. ನಂದನಾ ಫೋನ್ ಮಾಡಿದಳು. ಬನ್ನಿ ಹಬ್ಬಕ್ಕೆ ಅಂದಳು. ಆ ಮೇಲೆ ಹೇಮಾಳೂ ಫೋನ್ ಮಾಡಿ, 'ಬನ್ನಿ ಭಾವ, ನೀವಿರದೆ ಮನೆ ಬಿಕೋ ಅಂತಿದೆ' ಅಂದಳು. ನನಗೂ ಅವಳನ್ನು ಮಿಸ್ ಮಾಡ್ಕೋತಿದೀನಿ ಅನ್ನಿಸಿತು. ಆ ಸಂಜೆಯೇ ಹೋದೆ. ನನಗಾಗಿ ಒಳ್ಳೆಯ ಅಡಿಗೆ ಮಾಡಿದ್ದಳು. ಹಾಗೇ ನಾನು ಕೊಟ್ಟ ಸೀರೆ ಉಟ್ಟುಕೊಂಡಿದ್ದಳು. 'ಯು ಲುಕ್ ನೈಸ್' ಎಂದೆ. ನಾಚಿಕೊಂಡು ನಕ್ಕಳು. ನಿಜವಾಗಿ ಸುಂದರವಾಗಿ ಕಾಣಿಸಿದಳು. ಅಂದ, ಆಕಾರ, ಬಣ್ಣಗಳಲ್ಲಿ ಸೌಂದರ್ಯವಿದೆ ಎಂದುಕೊಂಡಿದ್ದವನಿಗೆ ಅದಿರುವುದು ನಿಸ್ಪೃಹತೆಯಲ್ಲಿ ಅಂತ ಮೊದಲ ಬಾರಿಗೆ ಅನ್ನಿಸಿತು.

ಮಾರನೇ ಸಂಜೆ ಡಿನ್ನರಿಗೆ ಹೊರಗೆ ಹೋಗೋಣವೆಂಬ ಆಹ್ವಾನ ಬಂತು. ನಂದನಾ ತಲೆಯಿಂದ ಕಾಲಿನವರೆಗೂ ಅಲಂಕರಿಸಿಕೊಂಡು ಕಾಯುತ್ತಿದ್ದಳು. ಅವಳಿಷ್ಟದ ಪಂಚತಾರಾ ಹೋಟೆಲ್‌ನಲ್ಲಿ ಊಟ ಮುಗಿಸಿ ಹೊರಟು ಬರುವಾಗ... 'ಇನ್ನೊಂದಾರು ತಿಂಗಳು, ಅಪ್ಪ ಸುಧಾರಿಸಿಕೊಳ್ಳಲಿ, ಆಮೇಲೆ ಮದುವೆ ಮಾಡಿಕೊಳ್ಳೋಣ' ಅಂದಳು. ತಿಂದ ಊಟದ ಸವಿ ಘಾಟಾಗಿ ನೆತ್ತಿಗೇರಿದಂತಾಯ್ತು! ಇನ್ನೂ ಆರು ತಿಂಗಳು... ದಾರಕ್ಕೆ ಕಟ್ಟಿದ ಬಿಸ್ಕೆಟ್ಟನ್ನು ನಾಯಿಗೆ ತೋರಿಸಿ ಸಿಗದಂತೆ ಎತ್ತರೆತ್ತರಕ್ಕೆ ಎಳೆದಂತೆ ನಂದನಾಳ ಚರ್ಯೆ ಇತ್ತು ಎಂಬ ಗುಮಾನಿ ಮೊದಲಸಲ ನನಗೆ ಬಂತು. ಇವಳೇಕೆ ನನ್ನಿಂದ ದೂರವಿರಲು ಯತ್ನಿಸುತ್ತಿದ್ದಾಳೆಂಬ ಕಾರಣ ಹುಡುಕಬೇಕಿತ್ತು.

ಅವಳನ್ನು ಡ್ರಾಪ್ ಮಾಡುವ ನೆಪದಲ್ಲಿ ಕಾರಿಂದ ಕೆಳಗಿಳಿದೆ. ನೇರ ಅವಳ ರೂಮಿಗೇ ಹೋದೆ. ಪ್ರಶ್ನಾರ್ಥಕವಾಗಿ ನೋಡಿದಳು. 'ನಂದು ಐ ಲವ್ ಯು... ನನ್ನ ಇನ್ನು ಕಾಯಿಸಬೇಡ' ಅವಳನ್ನು ತಬ್ಬಿದೆ. ನನ್ನನ್ನು ದೂಡಿದಳು. ಕೇರ್ ಮಾಡಲಿಲ್ಲ. ಉನ್ಮತ್ತನಾಗಿ ಅವಳನ್ನು ಎಲ್ಲೆಂದರಲ್ಲಿ ತಬ್ಬುತ್ತಾ ಮುತ್ತಿಡುತ್ತಾ ಹೋದೆ. ಇದ್ದಕ್ಕಿದ್ದಂತೆ ನನ್ನ ತೋಳನ್ನು ಬಲವಾಗಿ ಕಚ್ಚಿ ನೂಕಿಬಿಟ್ಟಳು. ನನ್ನ ಉನ್ಮಾದ ಜರ್ರನೆ ಇಳಿಯಿತು. ಅವಮಾನದಿಂದ ಮೈ ಬೆಂಡಾಯಿತು. ತೀರ ಅವಾಚ್ಯ ಬೈಗುಳಗಳು ಬಾಯಿಗೆ ಬಂದವು. ಕೋಪದಿಂದ ಧುಮುಗುಟ್ಟುತ್ತಾ ಡೈನಿಂಗ್ ಹಾಲಿಗೆ ಹೋದೆ. ಹೇಮಾ ಅಲ್ಲೇ ಕೂತಿದ್ದಳು. ನನ್ನ ಸ್ಥಿತಿ ನೋಡಿ ಊಹಿಸಿಕೊಂಡಳೊ ಏನೋ, ನೀರಿನ ಲೋಟವನ್ನೆತ್ತಿಕೊಂಡು ಬಂದಳು. ಅದನ್ನಲ್ಲೇ ಇಡಿಸಿ ಅವಳನ್ನು ಬಲವಾಗಿ ತಬ್ಬಿದೆ. 'ಭಾವ ಬೇಡಿ ಪ್ಲೀಸ್' ಎಂದು ಹತ್ತಿರವಾದಳು. ನನ್ನ ಕೈ ಹಿಡಿದು ಅವಳ ಕೋಣೆಗೇ ಕರೆದೊಯ್ದಳು. ರೋಮಾಂಚಕ ಪ್ರಥಮಾನುಭವದ ಸುಖ ಕೊಟ್ಟಳು.

ಮಾರನೇ ದಿನ ನಾನು ಫ್ಯಾಕ್ಟ್ರಿಗೆ ಹೋಗಲಿಲ್ಲ. ನಂದನಾ ಫೋನ್ ಮಾಡಿದಳು. 'ಈಗಲೇ ಬನ್ನಿ ಫ್ಯಾಕ್ಟ್ರೀಲಿ ಏನು ಮಾಡಬೇಕೂಂತ ಗೊತ್ತಾಗ್ತಿಲ್ಲ' ಅಂತ ಗದ್ಗದಳಾಗಿ ಹೇಳಿದಳು. ಹೋದೆ, ಎಲ್ಲಾ ಮುಗಿವವರೆಗೆ ಸಂಜೆ ಆಯ್ತು. ಅವಳನ್ನು ಮನೆಗೆ ತಲುಪಿಸಲು ಹೋದಾಗ ಮನಸ್ಸಿನೊಳಗೆ ನಿಶ್ಚಯಿಸಿಕೊಂಡಿದ್ದೆ. ಬದುಕಿನಲ್ಲಿ ಸ್ಪಷ್ಟತೆಯಿರಬೇಕೆಂದು ಬದುಕೇ ಹೇಳಿಕೊಟ್ಟಿತ್ತು.

ನಾನವಳಿಗೆ ಹೇಳಿದೆ, 'ನಾನಿಲ್ಲಿ ಇನ್ನು ಇರುವುದಿಲ್ಲ. ಫ್ಯಾಕ್ಟ್ರಿಗೂ ಬರುವುದಿಲ್ಲ' ಅಂತ. 'ಅಯ್ಯೋ ಯಾಕೆ ಹೀಗಾಡ್ತೀರ? ಇನ್ನೊಂದಾರು ತಿಂಗಳಷ್ಟೇ; ಆ ಮೇಲೆ ಯಾರು ಬೇಡಾಂತಾರೆ ನಿಮ್ಮನ್ನ' ಅಂದಳು. ಅನುನಯಿಸುತ್ತಾ, 'ನಾನೇ ಬೇಡಾಂತಿದೀನಿ' ಅಂದೆ ನಿಖರವಾಗಿ. ದಿಗಿಲುಗೊಂಡಂತೆ 'ಯಾಕೆ? ಏನಾಯ್ತು?' ಅಂದಳು. 'ನೋಡು ನಂದನಾ, ನಾನಿವತ್ತು ಇಲ್ಲಿಗೆ ಬಂದಿರೋದು ನಮ್ಮ ಮದುವೆ ಒಪ್ಪಂದ ಮುರಿದುಕೊಳ್ಳಕ್ಕೆ. ನಂಗೀಗ ನಿನ್ನ ಮೇಲೆ ಯಾವ ಪ್ರೀತೀನೂ ಉಳಿದಿಲ್ಲ. ದಯವಿಟ್ಟು ನನ್ನ ಬಿಟ್ಟುಬಿಡು. ಬೇಕಾದ್ರೆ ನೀವು ತೀರಿಸಿರೋ ಬ್ಯಾಂಕ್ ಸಾಲಾನ ವಾಪಸ್ ಕೊಡ್ತೀನಿ' ಅಂದೆ ಕೈ ಮುಗಿಯುತ್ತಾ. ಕಣ್ತುಂಬಿದ್ದರೂ ಹನಿ ಇಳಿಯದಂತೆ ನಿಗಾವಹಿಸಿ,